


# ಕೃಷಿಯಲ್ಲದ ಕೃಷಿ

‘ರಾಸ್ಬೇರಿ ಬೆಳೆಸು... ಬೇಗ ಬೆಳೆಯೂ ಕೈಗೆ ಬರುತ್ತದೆ. ಒಳ್ಳೆ ಬೆಲೆಯೂ ಇದೆ.’

‘ಓಹ್! ಈ ಸಲ ಕೊಯ್ಲು ಮಾಡಲು ತಡವಾಯ್ತು. ನನ್ನ ಭತ್ತದ ಬೆಳೆಯೆಲ್ಲ ಹಾಳಾಗಿ ಹೋಯ್ತು. ಛೆ...’

‘ನಾನು ನಿನಗೆ ಒಂದು ಹಂದಿ, ಒಂದು ದನ ಕಳಿಸಿದ್ದೇನೆ ತಗೋ..’

–ಸಾಮಾನ್ಯವಾಗಿ ಕೃಷಿಕರು ಪರಸ್ಪರ ಭೇಟಿಯಾದಾಗ ಆಡುವ ಮಾತುಗಳಿವು. ಆದರೆ ಮೇಲೆ ಬರೆದಿರುವ ಮಾತುಗಳನ್ನು ಆಡಿದ್ದು ಕೃಷಿಕರಲ್ಲ. ಇದು ಯಾವುದೇ ನಾಟಕದ ಸಂಭಾಷಣೆಯೂ ಅಲ್ಲ. ಗೊಂದಲವೆ? ನಿಮ್ಮನ್ನು ಮತ್ತಷ್ಟು ಗಲಿಬಿಲಿಗೊಳಿಸಲಾರೆ. ಇವೆಲ್ಲವೂ ‘ಫಾರಂ ವಿಲ್ಲೇ’ ಎಂಬ ಕಂಪ್ಯೂಟರ್ ಆಟದ ಆಟಗಾರರು ಆಡಿದ ಮಾತುಗಳು.

**ಏನಿದು ಫಾರಂ ವಿಲ್ಲೇ?**

ಮೊದಲೇ ಸೂಚಿಸಿದಂತೆ ಫಾರಂ ವಿಲ್ಲೇ ಎಂಬುದು ಒಂದು ಕಂಪ್ಯೂಟರ್ ಆಟ. ಇದೊಂದು ಮಿಥ್ಯಾಲೋಕದ ಕೃಷಿ. ಇಲ್ಲಿ ಜಮೀನಿದೆ. ಜಮೀನು ಉಳಬೇಕಿದೆ. ಬಿತ್ತನೆ ಬೀಜಗಳಿವೆ. ಬೀಜ ಖರೀದಿಸಿ ಬಿತ್ತಬೇಕಿದೆ. ಸಕಾಲಕ್ಕೆ ಕೊಯ್ಲು ಮಾಡಬೇಕಾಗಿದೆ. ಹಣ್ಣಿನ ಮರಗಳು ಇವೆ. ಕುರಿ, ಕೋಳಿ. ಹಂದಿ ದನ, ಮೊಲ ಮುಂತಾದ ಪ್ರಾಣಿಗಳಿವೆ. ಕೆರೆ, ಫಾರಂ ಹೌಸ್ (ತೋಟದ ಮನೆ), ಟ್ರಾಕ್ಟರ್ ಎಲ್ಲವೂ... ಕೃಷಿಗೆ ಏನೆಲ್ಲಾ ಬೇಕೋ ಎಲ್ಲವೂ ಇವೆ. ನೆರೆ ಹೊರೆಯವರಿದ್ದಾರೆ. ಅವರು ಇಲ್ಲದಿರುವ ಸಮಯದಲ್ಲಿ ಅವರವರ ಜಮೀನಿಗೆ ಬರುವ ಕಾಗೆ/ ಅಥವಾ ಇತರ ಹಕ್ಕಿಗಳನ್ನು ಓಡಿಸಬೇಕು. ಎಲ್ಲವೂ ಕಂಪ್ಯೂಟರ್ ಪರದೆಯಲ್ಲಿ!

ಜಿಂಗಾ ಕಂಪನಿಯವರು ಅಭಿವೃದ್ಧಿಪಡಿಸಿರುವ ಈ ಆಟವು ‘ಫೇಸ್ ಬುಕ್’ ಎಂಬ ಸಾಮಾಜಿಕ ಸಂಪರ್ಕ ಸೇತು ಜಾಲ ಪುಟದಲ್ಲಿ ಉಚಿತವಾಗಿ ದೊರಕುತ್ತಿದೆ.

ಈ ಆಟ ಎಷ್ಟು ಜನಪ್ರಿಯವಾಗಿದೆ ಎಂದರೆ ಮಿಲಿಯಗಟ್ಟಲೆ ಜನರು ಈ ಆಟ ಆಡುತ್ತಾರೆ. ಎಷ್ಟೋ ಜನ ಗಡಿಯಾರದಲ್ಲಿ ಅಲಾರಂ ಇಟ್ಟು, ಬೆಳೆಯ ಕೊಯ್ಲು ಮಾಡುತ್ತಾರೆ. ಬಗೆ ಬಗೆಯ ಬೆಳೆಗಳನ್ನು ಬೆಳೆಯುತ್ತಾರೆ. ಬೇಲಿ ಹಾಕುತ್ತಾರೆ. ದನ/




ಕುರಿಗಳನ್ನು ನೆರೆ ಮನೆಯವರಿಗೆ ಕಾಣಿಕೆ ಕೊಡುತ್ತಾರೆ. ಕಂಪ್ಯೂಟರ್ ಮಾಯಾಜಾಲದ ಈ ಮೋಡಿಗೆ ಜನ ಮುಗಿಬೀಳುತ್ತಿದ್ದಾರೆ. ಹೆಚ್ಚಿನ ವಿವರ ತಿಳಿಯಲು ಡಬ್ಲ್ಯುಡಬ್ಲ್ಯುಡಬ್ಲ್ಯು ಡಾಟ್ ಫೇಸ್‌ಬುಕ್ ಡಾಟ್ ಕಾಮ್ ಜಾಲ ಪುಟವನ್ನು ಸಂಪರ್ಕಿಸಬಹುದು.

ನಿಜವಾದ ಕೃಷಿಯಿಂದ ಜನ ದೂರ ಸರಿಯುತ್ತಿರುವಾಗ ಈ ಮಿಥ್ಯಾ ಕೃಷಿಯತ್ತ ಜನ ವಾಲುತ್ತಿರುವುದು ವಿಪರ್ಯಾಸವೇ ಸರಿ!

■ **ಅರ್ಚನಾ**